ವರಕವಿ ದ. ರಾ. ಬೇಂದ್ರೆ ಸ್ಮಾರಕ ನಿರ್ಮಾಣ

೨೩೫ ಶ್ರೀ ಎಸ್. ಆರ್. ಮೋರ (ಧಾರವಾಡ).— ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಯೋಜನಾ ಹಾಗೂ ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆಗಳು ಮತ್ತು ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದಲ್ಲಿ ವರಕವಿ ದ. ರಾ. ಬೇಂದ್ರೆ ಅವರ ಬಗ್ಗೆ ಸ್ಮಾರಕ ನಿರ್ಮಿಸುವ ಆಲೋಚನೆ ಸರ್ಕಾರಕ್ಕಿದೆಯೆ ?

ಆ) ಧಾರವಾಡದ ಸಾಧನಕೇರಿಯಲ್ಲಿರುವ ಅವರ ನಿವಾಸವನ್ನು ಸ್ಮಾರಕ ಮಾಡುವ ಬಗ್ಗೆ ರಾಜ್ಯ ಸರ್ಕಾರವು ಆಲೋಚನೆ ಮಾಡಿದೆಯೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ ಪ್ರವಾಸೋದ್ಯಮ, ಮತ್ತು ಸಂಸ್ಕೃತಿ ಸಚಿವರು). —

ಅ) ಇದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಕಾರಂಜಾ ನೀರಾವರಿ ಯೋಜನೆ

೨೬೨ ಶ್ರೀ ವಿಜಯಕುಮಾರ್ ಖಂಡ್ರೆ (ಭಾಲ್ಕಿ).— ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾರಂಜ ನೀರಾವರಿ ಯೋಜನೆ ಎಂದು ಪ್ರಾರಂಭ ಮಾಡಲಾಯಿತು ಹಾಗೂ ಈವರೆವಿಗೆ ವೆಚ್ಚವಾಗಿರುವ ಮೌಲ್ಯವೆಷ್ಟು ?

ಆ) ಈ ಯೋಜನೆ ಪೂರ್ಣಗೊಳಿಸಲು ಅವಶ್ಯವಿರುವ ಹಣದ ಮೊಬಲಗೇನು ?

ಇ) ಈ ಯೋಜನೆ ಪೂರ್ಣಗೊಳಿಸಲು ಕಾರ್ಯಕ್ರಮವೇನಾದರೂ ನಿಗದಿಪಡಿಸಲಾಗಿದೆಯೇ ?

ಈ) ಹಾಗಿದ್ದಲ್ಲಿ ಈ ಯೋಜನೆಗೆ ಪ್ರಸ್ತುತ ಸಾಲಿನಲ್ಲಿ ನೀಡಿರುವ ಅನುದಾನ ಹಾಗೂ ಮುಂಬರುವ ಸಾಲುಗಳಲ್ಲಿ ನೀಡಲಾಗುವ ಮೊಬಲಗೆಷ್ಟು ?

ಉ) ತ್ವರಿತಗತಿಯಲ್ಲಿ ಯೋಜನೆ ಪೂರ್ಣಗೊಳಿಸಲು ಸರ್ಕಾರವು ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ೧೯೭೨ನೇ ಡಿಸೆಂಬರ್ ಮಾಹೆಯಲ್ಲಿ ಪ್ರಾರಂಭ ಮಾಡಲಾಗಿದೆ ಮತ್ತು ಜನವರಿ ೯೦ರ ಅಂತ್ಯದ ವೇಳೆಗೆ ಒಟ್ಟು ೫೬.೯೬ ಕೋಟಿ ರೂ.ಗಳಷ್ಟು ವೆಚ್ಚ ಮಾಡಲಾಗಿದೆ.

ಆ) ಇನ್ನೂ ಸುಮಾರು ೪೧ ಕೋಟಿ ರೂ.ಗಳಷ್ಟು ಹಣದ ಅವಶ್ಯಕತೆಯಿರುವುದು.

ಇ) ಎಂಟನೇ ಪಂಚವಾರ್ಷಿಕ ಯೋಜನೆ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಲಾಗಿದೆ.

ಈ) ಪ್ರಸ್ತುತ ೧೯೮೯-೯೦ನೇ ಸಾಲಿನಲ್ಲಿ ಸುಮಾರು ೮೨೫ ಲಕ್ಷ ರೂ.ಗಳು ವೆಚ್ಚವಾಗಲಿದೆ. ಮತ್ತು ೧೯೯೦-೯೧ನೇ ಸಾಲಿನಲ್ಲಿ ೬೦೦ ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಉಳಿಕೆ ಅಗತ್ಯವಿರುವ ಹಣವನ್ನು ಎಂಟನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಒದಗಿಸಲಾಗುವುದು.

ಉ) ಅವಶ್ಯ ಹಾಗೂ ಅಗತ್ಯವಿರುವ ಅನುದಾನ ನೀಡುವುದು ಹಾಗೂ ಉಳಿದ ನಾಲಾ ಕಾಮಗಾರಿಗಳ ಕೆಲಸಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವುದು.

ಹೇಮಾವತಿ ಯೋಜನೆಯ ನಾಲಾ ಕೆಲಸಗಳು

೧೯೦ ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯಲ್ಲಿನ(ಹೇಮಾವತಿ ನಾಲಾ ವಲಯದ ವ್ಯಾಪ್ತಿಯಲ್ಲಿನ) ಹೇಮಾವತಿ ನಾಲಾ ಕೆಲಸಗಳು ಕಾರ್ಯಗತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?